DFA/1892293

## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1243 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | ದಿನಾಂಕ: 19.12.2024 |
| ಉತ್ತರಿಸಬೇಕಾದ ಸಚಿವರು | ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಘಟಕಗಳು ಸ್ಥಳೀಯವಾಗಿ ಎಷ್ಟು ತಳಹಂತದವರೆಗೆ ತನ್ನ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಿದೆ; ಹೋಬಳಿ ಅಥವಾ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಇಂತಹ ಘಟಕಗಳನ್ನು ಸ್ಥಾಪಿಸಲು ಇಲಾಖೆ ಮುಂದಾಗುವುದೇ; | ಹೌದು, ನ್ಯಾಯಾಲಯಗಳು ಸ್ಥಾಪನೆಯಾಗಿ ಕಾರ್ಯ ನಿರ್ವಹಿಸುತ್ತಿರುವ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಮತ್ತು ಕೆಲವು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಘಟಕಗಳನ್ನು ಸ್ಥಾಪಿಸಲಾಗಿದೆ. |
| (ಆ) | ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿ/ಪಂಗಡ ಸಹಿತ ಹಲವಾರು ಸಾಮಾಜಿಕವಾಗಿ ಹಿಂದುಳಿದ ಸಮುದಾಯಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಗುರುತಿಸಲು ಇಲಾಖೆ ಕೈಗೊಂಡಿರುವ ಕ್ರಮಗಳು ಯಾವುವು : | ಕಾನೂನು ಸೇವೆಗಳ ಪ್ರಾಧಿಕಾರದ ಅಧಿನಿಯಮ 1987ರ ಸೆಕ್ಷನ್ 12ರ ಪ್ರಕಾರ ಅರ್ಹರಿಗೆ ಉಚಿತ ಕಾನೂನು ಅರಿವು ಮತ್ತು ನೆರವನ್ನು ನೀಡಲು ಕ್ರಮ ಕೈಗೊಳ್ಳಲಾಗಿದೆ. ಅಂತವರ ಸಮಸ್ಯೆಗಳ ಹಾಗೂ ಹಕ್ಕುಗಳ ಬಗ್ಗೆ ಎಲ್ಲಾ ಹಂತದಲ್ಲಿ ಕಾರ್ಯಕ್ರಮಗಳ ಮೂಲಕ ಕಾನೂನು ಅರಿವನ್ನು ನೀಡಲಾಗುತ್ತಿದೆ. |
| (ಇ) | ಪರಿಶಿಷ್ಟ ಜಾತಿ/ಪಂಗಡ ಸಹಿತ ಹಲವಾರು ಸಾಮಾಜಿಕವಾಗಿ ಹಿಂದುಳಿದ ಸಮುದಾಯಗಳು ಮತ್ತು ದುರ್ಬಲ ವರ್ಗಗಳ ಜನರು ಮತ್ತು ಮಹಿಳೆಯರು ಇನ್ನೂ ತಮ್ಮ ಮೂಲಭೂತ ಅಗತ್ಯಗಳಿಗಾಗಿ ಪ್ರಯಾಸಪಡುತ್ತಿರುವ ಬಗ್ಗೆ ಇಲಾಖೆ ಯಾವ ರೀತಿ ಕ್ರಮವಹಿಸುತ್ತಿದೆ : | ಪರಿಶಿಷ್ಟ ಜಾತಿ/ಪಂಗಡ, ಹೊಂದಿಳಿದ ಸಮುದಾಯಗಳು, ದುರ್ಬಲ ವರ್ಗಗಳ ಜನರು ಮತ್ತು ಮಹಿಳೆಯರಿಗೆ ಉಚಿತ ಕಾನೂನು ನೆರವು ಮತ್ತು ಅರಿವನ್ನು ನೀಡಲಾಗುತ್ತಿದೆ ಮತ್ತು ಪ್ರಚಾರ ಹಾಗೂ ಅರಿವು ಕಾರ್ಯಕ್ರಮಗಳ ಮೂಲಕ ಅವರುಗಳಿಗೆ ಕಾನೂನು ಅರಿವನ್ನು ನೀಡಲಾಗುತ್ತಿದೆ. |

| | | |
|---|---|---|
| (ಈ) | ಕಾರ್ಮಿಕ, ಗುತ್ತಿಗೆ ಕಾರ್ಮಿಕ, ಸ್ವಯಂ ಸೇವಕ, ಇತ್ಯಾದಿ ರೀತಿಯ ಕಾನೂನು ವ್ಯಾಖ್ಯಾನದ ಮೂಲಕ ವಿವಿಧ ಹಿಂದುಳಿದ ಸಮುದಾಯಗಳು ಮತ್ತು ದುರ್ಬಲ ವರ್ಗಗಳ ಜನರು ಮತ್ತು ಮಹಿಳೆಯರಿಗೆ ಆಗುತ್ತಿರುವ ಶೋಷಣೆಯನ್ನು ತಡೆಯಲು ಇಲಾಖೆ ಯಾವ ರೀತಿಯಲ್ಲಿ ಕ್ರಮವಹಿಸಲಾಗುತ್ತಿದೆ? | ಕಾನೂನು ಸೇವೆಗಳ ಪ್ರಾಧಿಕಾರದ ಅಧಿನಿಯಮ, 1987ರ ಸೆಕ್ಷನ್ 12ರ ಪ್ರಕಾರ ಅರ್ಹರಿಗೆ ಉಚಿತ ಕಾನೂನು ಅರಿವು ಮತ್ತು ನೆರವನ್ನು ನೀಡಲು ಕ್ರಮ ಕೈಗೊಳ್ಳಲಾಗಿದೆ. ಅಂತವರ ಸಮಸ್ಯೆಗಳ ಹಾಗೂ ಹಕ್ಕುಗಳ ಬಗ್ಗೆ ಎಲ್ಲಾ ಹಂತದಲ್ಲಿ ಕಾರ್ಯಕ್ರಮಗಳ ಮೂಲಕ ಕಾನೂನು ಅರಿವನ್ನು ನೀಡಲಾಗುತ್ತಿದೆ.<br>ಮುಂದುವರೆದು, ಆ ರೀತಿಯ ಸಮಸ್ಯೆಗಳು ಹಾಗೂ ಶೋಷಣೆಗೆ ಒಳಗಾಗುತ್ತಿರುವ |



Generated from eOffice by H K PATIL, MIN-LAW(HKP), MINISTER, MINISTER - LAW on 16/12/2024 03:11 PM

DFA/1892293

| | | |
|---|---|---|
| | | ವ್ಯಕ್ತಿಗಳು ಕಂಡು ಬಂದಲ್ಲಿ ಕೂಡಲೇ ನಮ್ಮ ಪ್ರಾಧಿಕಾರಗಳು ಸಂಬಂಧಿಸಿದ ಇಲಾಖೆಗಳನ್ನು ಸಂಪರ್ಕಿಸಿ ಅವರಿಗೆ ದೊರೆಯಬೇಕಾದ ಸೌಲತ್ತುಗಳನ್ನು ದೊರೆಕಿಸಿಕೊಡುವಲ್ಲಿ ಸಫಲವಾಗುತ್ತೇವೆ. |

**ಸಂಖ್ಯೆ: ಲಾ-ಎಲ್‌ಎಡಿ/599/2024**

**(ಹೆಚ್. ಕೆ. ಪಾಟೀಲ)**
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು



Generated from eOffice by H K PATIL, MIN-LAW(HKP), MINISTER, MINISTER - LAW on 16/12/2024 03:11 PM